ದಿನಾಂಕಃ 07.07.2026

ಅಸಲುದಾವಃ 115/2024

ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಎಷ್ಟು ಐಟಂ ಸ್ವತ್ತುಗಳಿಗೆ ಕೇಸು ಹಾಕಿದ್ದೀರಿ ಎಂದರೆ ಸಾಕ್ಷಿ ಸುಮಾರು 10-15 ಸ್ವತ್ತುಗಳಿಗೆ ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ಸದರಿ 10-15 ಸ್ವತ್ತುಗಳು ಹೊಸಕೆರೆಹಳ್ಳಿ ಮತ್ತು ಮಾರಸಿಂಗಹಳ್ಳಿ ಎಲ್ಲೆಯಲ್ಲಿ ಇರುತ್ತವೆ. ಸದರಿ ಸ್ವತ್ತುಗಳ ಸರ್ವೆ ನಂ ಮತ್ತು ವಿಸ್ತೀರ್ಣ ಹೇಳಲು ಆಗುವುದಾ ಎಂದರೆ ಸಾಕ್ಷಿ ಮರೆತಿದ್ದೇನೆ ಎಂದು ಉತ್ತರಿಸುತ್ತಾರೆ. ದಾವ ಆಸ್ತಿಗಳು ಎಷ್ಟು ಇವೆ ಎಂದು ನಿಮಗೆ ಕರಾರುವಕ್ಕಾಗಿ ಗೊತ್ತಿಲ್ಲ, ನಿಮ್ಮವು ಮತ್ತು ನಿಮ್ಮ ದೊಡ್ಡಪ್ಪನವರವು ಎರಡೂ ಸೇರಿವೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಮ್ಮ ದೊಡ್ಡಪ್ಪನ ಹೆಸರು ಗೂಳಿಗೌಡ. ನನ್ನ ದೊಡ್ಡಪ್ಪನಿಗೆ ಒಬ್ಬಳು ಹೆಣ್ಣು ಮಗಳು ಇದ್ದಾಳೆ. ಅವರ ಹೆಸರು ಸಾವಿತ್ರಮ್ಮ. ಸಾವಿತ್ರಮ್ಮನವರನ್ನು ಈ ಕೇಸಿನಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ಸೇರಿಸಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಸಾವಿತ್ರಮ್ಮನವರಿಗೂ ಈ ದಾವ ಸ್ವತ್ತಿನಲ್ಲಿ ನಿಮ್ಮ ಪ್ರಕಾರ ಹಕ್ಕಿದೆ ಎಂದರೆ ಸಾಕ್ಷಿ ಹಕ್ಕಿದೆ ಎಂದು ಉತ್ತರಿಸುತ್ತಾರೆ. ಸಾವಿತ್ರಮ್ಮನವರಿಗೆ ಎಷ್ಟು ಭಾಗಾಂಶದ ಹಕ್ಕಿದೆ ಎಂದರೆ ಸಾಕ್ಷಿ ನನ್ನ ದೊಡ್ಡಪ್ಪನಿಗೆ 4/1 ಭಾಗದ ಹಕ್ಕಿದೆ ಎಂದು ಉತ್ತರಿಸುತ್ತಾರೆ. ನಿಮ್ಮ ದೊಡ್ಡಪ್ಪನ ಮಗಳಾದ ಸಾವಿತ್ರಮ್ಮನವರಿಗೆ ಭಾಗಾಂಶದ ಹಕ್ಕಿದೆ ಎಂದು ಹೇಳಿದ್ದೀರಿ, ಸದರಿ ಸಾವಿತ್ರಮ್ಮನವರನ್ನು ಈ ಕೇಸಿನಲ್ಲಿ ಯಾಕೆ ಕೈ ಬಿಟ್ಟಿದ್ದೀರಿ ಎಂದರೆ ಸಾಕ್ಷಿ ಅವರಿಗೆ ಹಕ್ಕಿದೆ, ಆದರೆ ನಾವು ನಮ್ಮ ಭಾಗದ ಹಕ್ಕನ್ನು ಕೇಳುತ್ತಿದ್ದೇವೆ ಎಂದು ಉತ್ತರಿಸುತ್ತಾರೆ. ಯಾವ ಕಾರಣಕೆ ಸಾವಿತ್ರಮ್ಮನವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಅವರಿಗೆ 2 ಎಕರೆ ಜಮೀನನ್ನು ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಆ 2 ಎಕರೆ ಜಮೀನನ್ನು ಈ ಕೇಸಿನಲ್ಲಿ ಸೇರಿಸಿದ್ದೇವೆ.

2. ನಿಮ್ಮ ಇನ್ನೊಬ್ಬ ದೊಡ್ಡಪ್ಪ ಕರಿಗೌಡರಿಗೆ ಮಕ್ಕಳಿಲ್ಲವಾ ಎಂದರೆ ಸಾಕ್ಷಿ ಇದ್ದಾರೆ ಎಂದು ಉತ್ತರಿಸುತ್ತಾರೆ. ಗೂಳಿಗೌಡ, ಕರಿಗೌಡ ಮತ್ತು ದ್ಯಾಪೇಗೌಡ ಅಂದರೆ ನಿಮ್ಮ ತಂದೆ ಹಾಗೂ ದೊಡ್ಡಪ್ಪಂದಿರು ಇವರ ನಡುವೆ ಭಾಗ ಆಗಿರಲಿಲ್ಲವಾ ಎಂದರೆ ಸಾಕ್ಷಿ

ಕರಿಗೌಡರವರು ಮಾತ್ರ ನಾನು ಸಣ್ಣ ಹುಡುಗನಿದ್ದಾಗಲೆ ಭಾಗವಾಗಿದ್ದರು ಎಂದು ಉತ್ತರಿಸುತ್ತಾರೆ. ಕರಿಗೌಡರವರು ಭಾಗ ಆಗಿರುವುದಕ್ಕೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಅವರ 3/1 ಭಾಗವನ್ನು ಖಾತೆ ಮಾಡಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಗೂಳಿಗೌಡ ಮತ್ತು ನಿಮ್ಮ ತಂದೆ ದ್ಯಾಪೇಗೌಡ ಒಟ್ಟು ಕುಟುಂಬದಲ್ಲಿ ಇದ್ದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ದಾಖಲಾತಿಗಳು ಇರುವುದಿಲ್ಲ ಆದರೆ ಒಟ್ಟು ಕುಟುಂಬದಲ್ಲಿ ಇದ್ದೆವು ಎಂದು ಉತ್ತರಿಸುತ್ತಾರೆ. ಗೂಳಿಗೌಡ ತೀರಿಕೊಂಡು ಎಷ್ಟು ವರ್ಷವಾಯಿತು ಎಂದರೆ ಸಾಕ್ಷಿ 1992 ರಲ್ಲಿ ತೀರಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಗೂಳಿಗೌಡರವರ ಹೆಂಡತಿ ಯವಾಗ ತೀರಿಕೊಂಡರು ಎಂದರೆ ಸಾಕ್ಷಿ ಗೂಳಿಗೌಡರು ತೀರಿಕೊಂಡ 10 ವರ್ಷದ ಬಳಿಕ ಅವರ ಹೆಂಡತಿ ಬಚ್ಚಮ್ಮ ತೀರಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಗೂಳಿಗೌಡರ ಮಗಳು ಸಾವಿತ್ರಮ್ಮನವರನ್ನು ಯರಗನಹಳ್ಳಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ಸಾವಿತ್ರಮ್ಮನವರ ಮದುವೆಯಾಗಿ ಎಷ್ಟು ವರ್ಷವಾಗಿದೆ ಹೇಳಬಹುದಾ ಎಂದರೆ ಸಾಕ್ಷಿ ನಾನು ಹುಟ್ಟಿರಲಿಲ್ಲ ಎಂದು ಉತ್ತರಿಸುತ್ತಾರೆ.

3. ದಾವ ಸ್ವತ್ತುಗಳ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ನಾವು ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದೆವು ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ದ್ಯಾಪೇಗೌಡರ ಹೆಸರಿನಲ್ಲಿ ಎಷ್ಟು ಸ್ವತ್ತುಗಳು ಇದ್ದವು ಮತ್ತು ನಿಮ್ಮ ದೊಡ್ಡಪ್ಪ ಗೂಳಿಗೌಡರ ಹೆಸರಿನಲ್ಲಿ ಎಷ್ಟು ಸ್ವತ್ತುಗಳು ಇದ್ದವು ಎಂದರೆ ಸಾಕ್ಷಿ 9 ಸ್ವತ್ತುಗಳು ಗೂಳಿಗೌಡರ ಹೆಸರಿನಲ್ಲಿ ಇವೆ, ಇನ್ನೂ ಉಳಿಕೆ ಸ್ವತ್ತುಗಳು ನಮ್ಮ ತಂದೆಯ ಹೆಸರಿನಲ್ಲಿ ಇವೆ, ಈ ವಿಚಾರ ಕೇಸು ಹಾಕುವ ಸಮಯದಲ್ಲಿ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಗೂಳಿಗೌಡರ ಹೆಸರಿಗೆ ಪ್ರತ್ಯೇಕವಾಗಿ ಖಾತೆ ಯಾವಾಗ ಆಯಿತು ಹಾಗೆಯೇ ನಿಮ್ಮ ತಂದೆಯ ಹೆಸರಿಗೆ ಪ್ರತ್ಯೇಕವಾಗಿ ಖಾತೆ ಯಾವಾಗ ಆಯಿತು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಹೆಸರಿಗೆ ಹಾಗೂ ಗೂಳಿಗೌಡರ ಹೆಸರಿಗೆ ಖಾತೆ ಬದಲಾವಣೆಯಾಗಿ ಇಲ್ಲಿಗೆ 32 ವರ್ಷವಾಯಿತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಗೂಳಿಗೌಡ ಹಾಗೂ ನಿಮ್ಮ ತಂದೆಯ ಹೆಸರಿಗೆ ಸ್ವತ್ತುಗಳ ಖಾತೆ ಆಗಿರುವ ವಿಚಾರ ನಿಮಗೆ ತಿಳಿದು ಬಂದ ನಂತರ ಯಾವ ಆದಾರದ ಮೇಲೆ ಆ ರೀತಿ ಸ್ವತ್ತುಗಳ ಖಾತೆ ಆಗಿರುತ್ತವೆ ಎಂದು ಮೂಲವನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ, ತಿಳಿದುಕೊಳ್ಳಲಿಲ್ಲ ಎಂದು ಉತ್ತರಿಸುತ್ತಾರೆ. ಈ ದಾವೆಯಲ್ಲಿ ಗೂಳಿಗೌಡರ ವಾಸದ ಮನೆಯನ್ನು ಸೇರಿಸಿಲ್ಲ ಹಾಗೂ ದ್ಯಾಪೇಗೌಡರ ವಾಸದ ಮನೆಯನ್ನೂ ಸೇರಿಸಿಲ್ಲ ಕೇವಲ ಜಮೀನುಗಳನ್ನು

ಮಾತ್ರ ಸೇರಿಸಿದ್ದೀರಿ ಎಂದರೆ ಸಾಕ್ಷಿ 11 ಗುಂಟೆ ಜಮೀನಿನಲ್ಲಿಯೇ 2 ಕೈ ಹಂಚಿನ ಮನೆಗಳು ಇವೆ 1 ಆರ್.ಸಿ.ಸಿ ಮನೆ ಇದೆ ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದ 11 ಗುಂಟೆ ಜಮೀನಿನ ಸರ್ವೆ ನಂ. ಏನು ಎಂದರೆ ಸಾಕ್ಷಿ ಸರ್ವೆ ನಂ. ನೋಡಿ ಹೇಳಬೇಕು ಎಂದು ಉತ್ತರಿಸುತ್ತಾರೆ. ಸದರಿ 11 ಗುಂಟೆ ಜಮಿನಿನ ಚೆಕ್ಕು ಬಂದಿ ಹೇಳಬಹುದಾ ಎಂದರೆ ಸಾಕ್ಷಿ ಹೇಳುತ್ತೇನೆ, ಪೂರ್ವಕ್ಕೆ ದ್ಯಾವೇಗೌಡರ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ನಮ್ಮ ತಂದೆಯ ಇನ್ನೊಂದು 8 ಗುಂಟೆ ಜಮೀನು ಇದೆ ಎಂದು ಉತ್ತರಿಸುತ್ತಾರೆ. ಈಗ ಹೇಳಿದ ಚೆಕ್ಕುಬಂದಿ ಒಳಗಿನ ಯಾವುದೇ ಜಮೀನು ಈ ದಾವ ಷೆಡ್ಯೂಲ್ ನಲ್ಲಿ ಇಲ್ಲ ಎಂದರೆ ಸಾಕ್ಷಿ ಇದೆ ಎಂದು ಉತ್ತರಿಸುತ್ತಾರೆ. ಈ ಮೇಲೆ ನೀವು ಹೇಳಿದ 11 ಗುಂಟೆ ಜಮೀನಿನಲ್ಲಿ 2 ಕೈ ಹಂಚಿನ ಮನೆಗಳು ಮತ್ತು 1 ಆರ್.ಸಿ.ಸಿ ಮನೆ ಇದೆ ಎಂದು ಹೇಳಿರುತ್ತೀರಿ ಸದರಿ ಕೈ ಹಂಚಿನ ಮನೆ ನಿಮ್ಮ ತಾತನ ಕಾಲದಲ್ಲಿ ಕಟ್ಟಿದ್ದಾ ಅಥವಾ ನಿಮ್ಮ ದೊಡ್ಡಪ್ಪ ಗೂಳಿಗೌಡ ಮತ್ತು ನಿಮ್ಮ ತಂದೆ ಹಾಗೂ ಕರಿಗೌಡರು ಕಟ್ಟಿದ್ದಾ ಎಂದರೆ ಸಾಕ್ಷಿ ನಮ್ಮ ತಂದೆ ಹಾಗೂ ಗೂಳಿಗೌಡ ಮತ್ತು ಕರಿಗೌಡ ಮೂರು ಜನ ಸೇರಿ ಕಟ್ಟಿದ್ದು ಎಂದು ಉತ್ತರಿಸುತ್ತಾರೆ. ಪುನಃ ಮುಂದುವರಿದು ಮೂರು ಜನರು ಸೇರಿ ಕಟ್ಟಿದ್ದಂತೆ ಅದು ನಮಗೆ ಗೊತ್ತಿಲ್ಲ ಎಂದು. ಆರ್.ಸಿ.ಸಿ ಮನೆಯನ್ನು ಕಟ್ಟಿ ಎಷ್ಟು ವರ್ಷವಾಯಿತು ಎಂದರೆ ಸಾಕ್ಷಿ ಸುಮಾರು 10 ವರ್ಷ ಎಂದು ಉತ್ತರಿಸುತ್ತಾರೆ. ಸದರಿ ಆರ್.ಸಿ.ಸಿ ಮನೆಯನ್ನು ಚಿಕ್ಕತಮ್ಮಯ್ಯ ಕಟ್ಟಿಸಿದ್ದು ಎಂದರೆ ಸಾಕ್ಷಿ ಇಲ್ಲ, ನಾವು ಅಣ್ಣ ತಮ್ಮಂದಿರು ಸೇರಿ ಕಟ್ಟಿಸಿದ್ದು ಎಂದು ಉತ್ತರಿಸುತ್ತಾರೆ. ಸದರಿ ಆರ್.ಸಿ.ಸಿ ಮನೆ ಚಿಕ್ಕತಮ್ಮಯ್ಯನವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನಮ್ಮ ದೊಡ್ಡಪ್ಪ ಗೂಳಿಗೌಡನ ಹಿರಿಯ ಮಗನ ಹೆಸರಿಗೆ ಪೌತಿ ಖಾತೆ ಮೂಲಕ ಹೋಗಿದೆ ಎಂದು ಉತ್ತರಿಸುತ್ತಾರೆ. ಚಿಕ್ಕತಮ್ಮಯ್ಯನವರ ಬದುಕಿದ್ದಾಗ ಅವರ ಹೆಂಡತಿ ಮಕ್ಕಳು ಆ ಆರ್.ಸಿ.ಸಿ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ನಾವೆಲ್ಲರೂ ಸೇರಿ ಕಟ್ಟಿದ್ದರಿಂದ ಕೈ ಹಂಚಿನ ಮನೆಯಲ್ಲಿ ಊಟ ತಿಂಡಿ ಮಾಡಿಕೊಂಡು ಆರ್.ಸಿ.ಸಿ ಮನೆಯಲ್ಲಿ ಎಲ್ಲರೂ ಮಲಗುತ್ತಿದ್ದೆವು ಎಂದು ಉತ್ತರಿಸುತ್ತಾರೆ.

4. ನಮ್ಮ ತಂದೆಗೆ ಡಿ.ರಾಮಚಂದ್ರಯ್ಯ ದೊಡ್ಡ ಮಗ ಎಂದರೆ ಸರಿ. ಸದರಿಯವರು ಈಗಲೂ ಬದುಕಿದ್ದಾರೆ ಎಂದರೆ ಸರಿ. ದ್ಯಾಪೇಗೌಡರ ಕುಟುಂಬಕ್ಕೆ ದ್ಯಾಪೇಗೌಡರು ಬದುಕಿದ್ದಾಗ ಅವರ ಒಟ್ಟು ಕುಟುಂಬಕ್ಕೆ ಯಜಮಾನರಾಗಿದ್ದರು ಎಂದರೆ ಸಾಕ್ಷಿ ಇಲ್ಲ, ವ್ಯವಸಾಯಕ್ಕೆ ಮಾತ್ರ ಸೀಮಿತವಾಗಿತ್ತು ವ್ಯವಹಾರಗಳನ್ನು ನಮ್ಮ 2 ನೇ ಅಣ್ಣನಾದ ಚಿಕ್ಕತಮ್ಮಯ್ಯ ನೋಡಿಕೊಳ್ಳುತ್ತಿದ್ದರು ಎಂದು ಉತ್ತರಿಸುತ್ತಾರೆ.

ದ್ಯಾಪೇಗೌಡರ ಕುಟುಂಬಕ್ಕೆ ದ್ಯಾಪೇಗೌಡರು ತೀರಿಕೊಂಡ ನಂತರ ಅವರ ದೊಡ್ಡ ಮಗ ರಾಮಚಂದ್ರಯ್ಯ ಕುಟುಂಬದ ಯಜಮಾನ ಆಗುತ್ತಾರೆ ಅಲ್ಲವೇ ಎಂದರೆ ಸಾಕ್ಷಿ ಕಾನೂನಿನಲ್ಲಿ ಆ ರೀತಿ ಇರಬಹುದು ಆದರೆ ಕುಟುಂಬದಲ್ಲಿ ಯಾರಿಗೆ ವ್ಯಾವಹಾರಿಕ ಜ್ಞಾನ ಚೆನ್ನಾಗಿ ಇರುತ್ತದೋ ಅವರೇ ವ್ಯವಹಾರ ನೋಡಿಕೊಳ್ಳುವುದು ನಮ್ಮ ಹಳ್ಳಿಯ ವಾಡಿಕೆ ಎಂದು ಉತ್ತರಿಸುತ್ತಾರೆ. ಚಿಕ್ಕತಮ್ಮಯ್ಯ ನಿಮ್ಮ ತಂದೆಯ ಒಟ್ಟು ಕುಟುಂಬದ ವ್ಯವಹಾರ ಮಾಡುತ್ತಿದ್ದ ಬಗ್ಗೆ ದಾಖಲಾತಿ ಏನಾದರು ಇವೆಯಾ ಎಂದರೆ ಸಾಕ್ಷಿ ದಾಖಲೆಗಳೇನೂ ಇಲ್ಲ, ನಾವು ವ್ಯವಸಾಯ ಮಾಡುತ್ತಿದ್ದೆವು ಅವರು ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದು ಉತ್ತರಿಸುತ್ತಾರೆ. ಈ ವಿಚಾರವನ್ನು ನಿಮ್ಮ ದಾವೆಯಲ್ಲಿ ಬರೆದು ಹಾಕಿದ್ದೀರಾ ಎಂದರೆ ಸಾಕ್ಷಿ ಬರೆದಿದೆ ಎಂದು ಉತ್ತರಿಸುತ್ತಾರೆ.

5. ನಾನು 9 ನೇ ತರಗತಿಯವರೆಗೆ ಓದಿದ್ದೇನೆ. ಈ ಕೇಸು ಹಾಕುವ ಕಾಲಕ್ಕೆ ದಾವ ಸ್ವತ್ತಿನ ಆರ್.ಟಿ.ಸಿ ಯಾರ ಯಾರ ಹೆಸರಿನಲ್ಲಿ ಇತ್ತು ಎಂದು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ, ಆದರೆ ನನಗೆ ಸ್ವಲ್ಪ ಜ್ಞಾಪಕ ಶಕ್ತಿ ಕಡಿಮೆ ಎಂದು ಉತ್ತರಿಸುತ್ತಾರೆ. ನಿಪಿ-7 ಸರ್ವೆ ನಂ.189/ಎ ಇದು ಚಿಕ್ಕತಮ್ಮಯ್ಯನವರ ಹೆಸರಿನಲ್ಲಿ ಇರುತ್ತದೆ. ಸದರಿ ಸ್ವತ್ತು ಚಿಕ್ಕತಮ್ಮಯ್ಯನವರಿಗೆ 1993-94 ನೇ ಸಾಲಿನಲ್ಲಿ ಎಂ.ಆರ್. ನಂ.20/1993-94 ರಂತೆ ಖಾತೆ ಬದಲಾವಣೆಯಾಗಿದೆ ಎಂದರೆ ಸಾಕ್ಷಿ ಸದರಿ ದಾಖಲಾತಿಯನ್ನು ತೆಗೆದುಕೊಂಡ ನಂತರ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಸದರಿ ಸ್ವತ್ತಿನ ಖಾತೆ ವಿಲ್ ಆದಾರದ ಮೇಲೆ ಖಾತೆ ಬದಲಾವಣೆಯಾಗಿದೆ ಎಂದು ಬರೆದಿದೆ ಎಂದರೆ ಸಾಕ್ಷಿ ಆರ್.ಟಿ.ಸಿ ತೆಗೆದುಕೊಂಡ ನಂತರ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಸದರಿ ವಿಚಾರ ಗೊತ್ತಾದ ನಂತರ ವಿಲ್ ಅನ್ನು ಯಾರು ಬರೆದಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಗೂಳಿಗೌಡ ಬರೆದಿದ್ದಾರೆ ಎಂದು ಗೊತ್ತಾಯಿತು ಆದರೆ ಆ ವಿಚಾರ ನನಗೆ ಗೊತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ವಿಚಾರ ಗೊತ್ತಾದ ನಂತರ ಗೂಳಿಗೌಡ ವಿಲ್ ಮೂಲಕ ಚಿಕ್ಕತಮ್ಮಯ್ಯನವರಿಗೆ ಎಷ್ಟು ಆಸ್ತಿ ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೀರಿ ಎಂದರೆ ಸಾಕ್ಷಿ 10 ಆಸ್ತಿಗಳನ್ನು ಎಂದು ಉತ್ತರಿಸುತ್ತಾರೆ. ಗೂಳಿಗೌಡರ ಮಗಳು ಸಾವಿತ್ರಮ್ಮನವರಿಗೆ ಎಷ್ಟು ಆಸ್ತಿಗಳನ್ನು ವಿಲ್ ಮೂಲಕ ಕೊಟ್ಟಿದ್ದಾರೆ ಎಂದರೆ ಸಾಕ್ಷಿ 2 ಎಕರೆ ಅವರಿಗೆ ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ವಿಲ್ ನಲ್ಲಿ ಚಿಕ್ಕತಮ್ಮಯ್ಯನವರಿಗೆ ಯಾವ ಮನೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ವಿಲ್ ನಲ್ಲಿ ಮನೆ ಎಂದು ಕಾಣಿಸಿಲ್ಲ ಎಂದು ಉತ್ತರಿಸುತ್ತಾರೆ. ಸಾವಿತ್ರಮ್ಮನವರಿಗೆ ವಿಲ್ ನಲ್ಲಿ ಕೊಟ್ಟ 2 ಎಕರೆ ಜಮೀನು ಅವರ ಹೆಸರಿಗೆ ಖಾತೆ ಆಗಿದೆಯಾ ಎಂದರೆ ಸಾಕ್ಷಿ

ಖಾತೆ ಆಗಿದೆ ಆದರೆ ವಿಲ್ ಮೂಲಕ ಕೊಟ್ಟಿದ್ದಲ್ಲ ಎಂದು ಉತ್ತರಿಸುತ್ತಾರೆ. ಸಾವಿತ್ರಮ್ಮನವರಿಗೆ ವಿಲ್ ಮೂಲಕ ಕೊಟ್ಟ ಜಮೀನಿನ ಸರ್ವೆ ನಂ. ಹೇಳಬಹುದಾ ಎಂದರೆ ಸಾಕ್ಷಿ ಸರ್ವೆ ನಂ, ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸಾವಿತ್ರಮ್ಮನವರಿಗೆ ಅವರ ತಂದೆ ಗೂಳಿಗೌಡರಮ ವಿಲ್ ಮೂಲಕ ಕೊಟ್ಟ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಿದ್ದೇವೆ ಎಂದು ಉತ್ತರಿಸುತ್ತಾರೆ. ಈ ಕೇಸು ಹಾಕುವ ಸಮಯದಲ್ಲಿ ದಾಖಲೆ ತೆಗೆಸಿ ನೋಡಿದಾಗ ವಿಲ್ ವಿಚಾರ ಗೊತ್ತಾಯಿತು ಎಂದು ಹೇಳಿದ್ದೀರಿ ಸದರಿ ವಿಲ್ ವಿಚಾರವನ್ನು ದಾವೆಯಲ್ಲಿ ಹೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಗೂಳಿಗೌಡರ ಹೆಸರಿನಲ್ಲಿ ಹೊಸಕೆರೆಗ್ರಾಮದ ಸರ್ವೆ ನಂ.424 ಇತ್ತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಮಾರಸಿಂಗನಹಳ್ಳಿ ಸರ್ವೆ ನಂ.187/ಸಿ ರಲ್ಲಿ 3 ಗುಂಟೆ + 3 ಗುಂಟೆ ಒಟ್ಟು 6 ಗುಂಟೆ, ಸರ್ವೆ ನಂ. 187/ಎ2 ರಲ್ಲಿ 63 ಗುಂಟೆ, ಸರ್ವೆ ನಂ. 191ರಲ್ಲಿ 63 ಗುಂಟೆ, ಸರ್ವೆ ನಂ. 203/1ಬಿ ರಲ್ಲಿ 16 ಗುಂಟೆ, ಸರ್ವೆ ನಂ. 188/ಎ ರಲ್ಲಿ 50 ಗುಂಟೆ, ಸರ್ವೆ ನಂ. 237/2ಎ ರಲ್ಲಿ 34 ಗುಂಟೆ, ಸರ್ವೆ ನಂ.415ರಲ್ಲಿ 1 ಎಕರೆ 20 ಗುಂಟೆ, ಸರ್ವೆ ನಂ. 345ರಲ್ಲಿ 20 ಗುಂಟೆ, ಸರ್ವೆ ನಂ. 377/1ಬಿ ರಲ್ಲಿ 10 ಗುಂಟೆ, ಮಾರಸಿಂಗನಹಳ್ಳಿ ಗ್ರಾಮದಲ್ಲಿ ನಿವೇಶನ ಸೈಟ್ 7/7 ಮತ್ತು 8/8 2 ನಿವೇಶನಗಳು ಮತ್ತು ಸೈಟ್ ನಂ.220/221, 222/222, 223/223, 224/224, 225/225, 226/226, 230/230, 231/231, ಇಷ್ಟು ಆಸ್ತಿಗಳು ಗೂಳಿಗೌಡರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ಕೇಸು ಹಾಕುವ ವೇಳೆ ದಾಖಲೆ ತೆಗೆದುಕೊಂಡಾಗ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಗೂಳಿಗೌಡರು ತೀರಿಕೊಂಡು ಎಷ್ಟು ವರ್ಷವಾಯಿತು ಎಂದರೆ ಸಾಕ್ಷಿ 1992ರಲ್ಲಿ ತೀರಿಕೊಂಡಿರಬಹುದು ಎಂದು ಉತ್ತರಿಸುತ್ತಾರೆ. ಗೂಳಿಗೌಡರು ತೀರಿಕೊಳ್ಳುವವರೆಗು ಚೆನ್ನಾಗಿದ್ದರು ಎಂದರೆ ಸಾಕ್ಷಿ ಚೆನ್ನಾಗಿದ್ದರು ಎಂದು ಉತ್ತರಿಸುತ್ತಾರೆ. ಪುನಃ ಮುಂದುವರಿದು ಅವರು ಸಾಯುವ 4ವರ್ಷಗಳು ಕೋಮಾದಲ್ಲಿ ಇದ್ದರು ಎಂದು. ಏನು ಖಾಯಿಲೆಯಾಗಿತ್ತು ಎಂದರೆ ಸಾಕ್ಷಿ ಟಿ.ಬಿ.ರೋಗ ಎಂದು ಉತ್ತರಿಸುತ್ತಾರೆ. ಏನು ದಾಖಲೆಗಳು ಇವೆ ಎಂದರೆ ಸಾಕ್ಷಿ ಅಷ್ಟು ವರ್ಷಗಳ ದಾಖಲೆ ಎಲ್ಲಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಗೂಳಿಗೌಡರು ಸಾಯುವವರೆಗು ಆರೋಗ್ಯವಾಗಿ ಮಾತನಾಡಿಕೊಂಡು ಚೆನ್ನಾಗಿದ್ದರು ಎಂದರೆ ಸಾಕ್ಷಿ ಇಲ್ಲ 4ವರ್ಷಗಳು ಕೋಮಾದಲ್ಲಿ ಇದ್ದರು_ಎಂದು ಉತ್ತರಿಸುತ್ತಾರೆ. ಗೂಳಿಗೌಡರು ಆರೋಗ್ಯವಂತರು ಮತ್ತು ಶಾರೀರಿಕವಾಗಿ ಮಾತ್ತು ಬುದ್ದಿ ಸ್ವಾಸ್ಥ್ಯ ಇರುವಾಗಲೆ ಅವರ ಮಗಳು ಸಾವಿತ್ರಮ್ಮ

ಮತ್ತು ಚಿಕ್ಕತಮ್ಮಯ್ಯನಿಗೆ ದಿ.24.07.1991ರಲ್ಲಿ ನೊಂದಾಯಿತ ವಿಲ್ ಮೂಲಕ ಕೊಟ್ಟಿರು ಎಂದರೆ ಸಾಕ್ಷಿ ಕೇಸು ಹಾಕುವ ವೇಳೆಗೆ ದಾಖಲಾತಿ ತೆಗೆದುಕೊಳ್ಳುವವರೆಗು ನಮಗೆ ಗೊತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ದಾಖಲಾತಿಗಳನ್ನು ತೆಗೆದುಕೊಂಡು ನೋಡಿದ ಬಳಿಕ ಗೂಳಿಗೌಡರು ವಿಲ್ ಬರೆದಿರುವ ವಿಚಾರವನ್ನು ನಿಮ್ಮ ವಕೀಲರಿಗೆ ಹೇಳಿದ್ದೀರಾ ಎಂದರೆ ಸಾಕ್ಷಿ 2 ವರ್ಷಗಳಾಯಿತು ಹೇಳಿದ್ದೇನೆ ಎನಿಸುತ್ತದೆ ಎಂದು ಉತ್ತರಿಸುತ್ತಾರೆ. ನೀವು ಸಲ್ಲಿಸಿರುವ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಾದರು ಗೂಳಿಗೌಡರವರು ಚಿಕ್ಕತಮ್ಮಯ್ಯನವರಿಗೆ ಮತ್ತು ಸಾವಿತ್ರಮ್ಮನವರಿಗೆ ವಿಲ್ ಬರೆದಿರುವ ವಿಚಾರ ದಾಖಲಾತಿಗಳನ್ನು ತೆಗೆದುಕೊಂಡ ಬಳಿಕ ಗೊತ್ತಾಯಿತು ಎಂದು ಹೇಳಿದ್ದೀರಾ ಎಂದರೆ ಸಾಕ್ಷಿ ಮರೆತುಬಿಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಸಾವಿತ್ರಮ್ಮನವರಿಗೆ ಹೊಸಕೆರೆಗ್ರಾಮ ಸರ್ವೆ ನಂ.424ರಲ್ಲಿ 2 ಎಕರೆ ಜಮೀನನ್ನು ವಿಲ್ ಮೂಲಕ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ವಿಲ್ ಮೂಲಕ ಕೊಟ್ಟಿಲ್ಲ ದಾನವಾಗಿ ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ದಾನ ಪತ್ರವನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಆರ್.ಟಿ.ಸಿ ಯಲ್ಲಿ ವಿಲ್ ಎಂದು ಕಾಣಿಸಿಲ್ಲ, ಹಾಗಾಗಿ ದಾನ ಕೊಟ್ಟಿರಬಹುದು ಎಂದು ನಾನು ಭಾವಿಸಿದೆ ಎಂದು ಉತ್ತರಿಸುತ್ತಾರೆ. ಸಾವಿತ್ರಮ್ಮನವರಿಗೆ ವಿಲ್ ಮೂಲಕ ಕೊಟ್ಟಂತಹ 2 ಎಕರೆ ಜಮೀನನ್ನು 15 ವರ್ಷಗಳ ಹಿಂದೆ ಸಾವಿತ್ರಮ್ಮ ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಆರ್.ಟಿ.ಸಿ ತೆಗೆದುಕೊಂಡು ನೋಡಿದ ನಂತರ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಯಾರಿಗೆ ಮಾರಿದ್ದಾರೆ ಎಂದು ಗೊತ್ತಾಯಿತು ಎಂದರೆ ಸಾಕ್ಷಿ ಶಂಕರಯ್ಯ ನವರಿಗೆ ಎಂದು ಉತ್ತರಿಸುತ್ತಾರೆ. ಸದರಿ ಶಂಕರಯ್ಯನವರನ್ನು ಈ ದಾವೆಯಲ್ಲಿ ಯಾಕೆ ಸೇರಿಸಿಲ್ಲ ಎಂದರೆ ಸಾಕ್ಷಿ ದುಡ್ಡು ಕೊಟ್ಟು ತೆಗೆದುಕೊಂಡು ಬಿಟ್ಟಿದ್ದಾರೆ ಎಂದು ನಾವೇ ಕೈ ಬಿಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಸಾವಿತ್ರಮ್ಮನವರಿಗೆ ಕೊಟ್ಟಿರುವ ಆಸ್ತಿಯನ್ನಾಗಲಿ, ಅವರು ಅದನ್ನು ಮಾರಾಟ ಮಾಡಿರುವ ವ್ಯಕ್ತಿಯನ್ನಾಗಲಿ ಈ ದಾವೆಯಲ್ಲಿ ನೀವು ಸೇರಿಸಿಲ್ಲ ಎಂದರೆ ಸಾಕ್ಷಿ ಸೇರಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಗೂಳಿಗೌಡರು ತೀರಿಕೊಂಡ ನಂತರ ಅವರ ಮಗಳು ಸಾವಿತ್ರಮ್ಮ ಹಾಗೂ ಚಿಕ್ಕತಮ್ಮಯ್ಯನವರಿಗೆ ಖಾತೆ ಬದಲಾವಣೆಯಾಗಿದೆ ಎಂದರೆ ಸಾಕ್ಷಿ ಆರ್,ಟಿ.ಸಿ ತೆಗೆದುಕೊಂಡ ನಂತರ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಈ ದಾವೆಯ ದಾವ ಐಟಂ ನಂ.2 ರಿಂದ 11 ಮೊದಲು ಗೂಳಿಗೌಡರ ಸ್ವತ್ತುಗಳ ಎಂದರೆ ಸಾಕ್ಷಿ ಆರ್,ಟಿ.ಸಿ ತೆಗೆದುಕೊಂಡ ನಂತರ ಗೊತ್ತಾಯಿತು, ನಾವೆಲ್ಲರೂ ಜಂಟಿಯಾಗಿಯೇ ಇದ್ದೆವು ಎಂದು ಉತ್ತರಿಸುತ್ತಾರೆ. ದಾವ ಐಟಂ ನಂ.2 ರಿಂದ 11 ಚಿಕ್ಕತಮ್ಮಯ್ಯನವರಿಗೆ

ಗೂಳಿಗೌಡರು ಬರೆದಿರುವ ವಿಲ್ ಆದಾರದ ಮೇಲೆ ಖಾತೆ ವರ್ಗಾವಣೆಯಾಗಿರುವುದು ಎಂದರೆ ಸಾಕ್ಷಿ ನಮಗೆ ವಿಲ್ ಆಗಿರುವುದು ಗೊತ್ತಿಲ್ಲ, ಆರ್,ಟಿ.ಸಿ ತೆಗೆದುಕೊಂಡ ನಂತರ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಗೂಳಿಗೌಡರು ಸಾವಿತ್ರಮ್ಮ ಮತ್ತು ಚಿಕ್ಕತಮ್ಮಯ್ಯನವರಿಗೆ ವಿಲ್ ಬರೆದಿರುವ ಆದಾರದ ಮೇಲೆ ಆ ಸ್ವತ್ತುಗಳ ಹಕ್ಕುದಾರರಾದರು ಎಂದರೆ ಸಾಕ್ಷಿ ವಿಲ್ ಮಾಡಿರುವುದು ನಮಗೆ ಗೊತ್ತಿರಲಿಲ್ಲ, ಗೂಳಿಗೌಡರು ಮೋಸ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ವಿಲ್ ವಿಚಾರ ಗೊತ್ತಾದ ಬಳಿದ ಗೂಳಿಗೌಡರು ಅವರ ಮಗಳಿಗೆ ಮತ್ತು ಚಿಕ್ಕತಮ್ಮಯ್ಯನವರಿಗೆ ವಿಲ್ ಬರೆದು ನಮಗೆ ಮೋಸ ಮಾಡಿದ್ದಾರೆ ಎಂದು ಗೂಳಿಗೌಡರ ವಿರುದ್ಧ ಎಲ್ಲಿಯಾದರು ಕೇಸ್ ಹಾಕಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಈ ಕೇಸು ಹಾಕಿದ್ದೇನೆ ಎಂದು ಉತ್ತರಿಸುತ್ತಾರೆ. ಗೂಳಿಗೌಡರು ಬದುಕಿದ್ದಾಗ ಅವರ ಆಸ್ತಿಗಳನ್ನು ನಿಮಗೂ ಕೊಡುತ್ತೇವೆ ಎಂದು ಹೇಳಿದ್ದರಾ ಎಂದರೆ ಸಾಕ್ಷಿ ಹೇಳಿದ್ದರು ಎಂದು ಉತ್ತರಿಸುತ್ತಾರೆ. ಈ ವಿಚಾರವನ್ನು ನಿಮ್ಮ ದಾವೆಯಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ಗೂಳಿಗೌಡರು ಚಿಕ್ಕತಮ್ಮಯ್ಯನವರಿಗೆ ವಿಲ್ ಮೂಲಕ ಕೊಟ್ಟ ಆಸ್ತಿಗಳನ್ನು ಯಾರಿಗಾದರು ಮಾರಾಟ ಮಾಡಿದ್ದಾರಾ ಎಂದರೆ ಸಾಕ್ಷಿ ಆರ್.ಟಿ.ಸಿ ತೆಗೆದು ನೋಡಿದ ಬಳಿದ ನಂಜೇಶ್ ಅವರಿಗೆ 34 ಗುಂಟೆ ಮಾರಿದ್ದಾರೆ ಎಂದು ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ಮಾರಾಟ ಮಾಡಿ ಎಷ್ಟು ವರ್ಷವಾಯಿತು ಎಂದರೆ ಸಾಕ್ಷಿ ಆರ್.ಟಿ.ಸಿ ನೋಡಿದರೆ ಗೊತ್ತಾಗುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಕ್ರಯವಾದ ಜಮೀನಿನ ಖಾತೆ ನಂಜೇಶ್ ಅವರ ಹೆಸರಿಗೆ ಹೋಗಿದೆಯಾ ಎಂದರೆ ಸಾಕ್ಷಿ ಹೋಗಿದೆ ಆರ್.ಟಿ.ಸಿ ತೆಗೆದುಕೊಂಡ ಬಳಿಕ ಗೊತ್ತಾಯಿತು ಎಂದು ಉತ್ತರಿಸುತ್ತಾರೆ. ನಂಜೇಶ್ ಅವರನ್ನು ಈ ದಾವೆಯಲ್ಲಿ ಯಾಕೆ ಸೇರಿಸಿಲ್ಲ ಎಂದರೆ ಸಾಕ್ಷಿ ದುಡ್ಡು ಕೊಟ್ಟು ತೆಗೆದುಕೊಂಡು ಬಿಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಚಿಕ್ಕತಮ್ಮಯ್ಯ ವಿಲ್ ಮೂಲಕ ಸ್ವತ್ತುಗಳ ಖಾತೆ ತಮ್ಮ ಹೆಸರಿಗೆ ವರ್ಗಾವಣೆಯಾದ ಬಳಿಕ ಸದರಿ ಸ್ವತ್ತುಗಳ ಮೇಲೆ ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಚಿಕ್ಕತಮ್ಮಯ್ಯ ತೀರಿಕೊಂಡ ನಂತರ ಅವರ ಹೆಂಡತಿ ಅಂಬುಜ ರವರ ಹೆಸರಿಗೆ ಆಸ್ತಿಗಳ ಖಾತೆ ಬದಲಾವಣೆಯಾಗಿದೆ ಎಂದರೆ ಸಾಕ್ಷಿ ಆರ್.ಟಿ.ಸಿ ತೆಗೆದುಕೊಂಡ ಬಳಿಕ ಗೊತ್ತಾಯಿತು ಎಂದು ಉತ್ತರಿಸುತ್ತಾರೆ.

6. ರತ್ನಮ್ಮ ನಮ್ಮ ಅಕ್ಕ. ಅವರು ಮತ್ತು ನಾವು ಚೆನ್ನಾಗಿದ್ದೇವೆ. ಚಿಕ್ಕತಮ್ಮಯ್ಯನಿಗೆ ಒಬ್ಬ ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು. ಚಿಕ್ಕತಮ್ಮಯ್ಯ ಅವರ ಹೆಣ್ಣು ಮಕ್ಕಳಿಗೆ ಆಸ್ತಿ ಕೊಟ್ಟಿದ್ದಾರಾ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಗೂಳಿಗೌಡರು ನಿಮಗೆ ಆಸ್ತಿ ಕೊಡದೇ ಇರುವ ಕಾರಣಕ್ಕೆ ನೀವು ಈ ದಾವೆಯನ್ನು ಹಾಕಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಗೂಳಿಗೌಡ, ಕರಿಗೌಡ ಮತ್ತು ದ್ಯಾಪೇಗೌಡರು ಸುಮಾರು 50 ವರ್ಷಗಳ ಹಿಂದೆಯೇ ಭಾಗ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಇಲ್ಲ ಕರಿಗೌಡರು ಮಾತ್ರ ಭಾಗವಾಗಿದ್ದರು, ಗೂಳಿಗೌಡ ಮತ್ತು ದ್ಯಾಪೇಗೌಡ ಒಟ್ಟು ಕುಟುಂಬದಲ್ಲಿಯೇ ಇದ್ದರು ಎಂದು ಉತ್ತರಿಸುತ್ತಾರೆ. ಗೂಳಿಗೌಡ ಮತ್ತು ದ್ಯಾಪೇಗೌಡ ಒಟ್ಟು ಕುಟುಂಬದಲ್ಲಿ ಇರಲೇ ಇಲ್ಲ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲಿಯೇ ಇದ್ದರು ಎಂದು ಉತ್ತರಿಸುತ್ತಾರೆ. ಗೂಳಿಗೌಡರ ಭಾಗಕ್ಕೆ ಬಂದ ಆಸ್ತಿಗಳು ಗೂಳಿಗೌಡರ ಹೆಸರಿಗೆ ಖಾತೆಯಾಗಿದ್ದು, ನಿಮ್ಮ ತಂದೆ ದ್ಯಾಪೇಗೌಡರ ಭಾಗಕ್ಕೆ ಬಂದ ಆಸ್ತಿಗಳು ದ್ಯಾಪೇಗೌಡರ ಹೆಸರಿಗೆ ಖಾತೆಯಾಗಿದ್ದವು ಎಂದರೆ ಸಾಕ್ಷಿ ಅದು ನನಗೆ ಆರ್.ಟಿ.ಸಿ ತೆಗೆದುಕೊಂಡ ನಂತರವೇ ಗೊತ್ತಾಯಿತು ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.